# ಪ್ರಾರ್ಥನೆ

**ತುಲ್ಯಲೋಷ್ಟಕಾಂಚನಂ ಚ ಹೇಯನೇಯಧೀಗತಂ**
**ಸ್ತ್ರೀಷು ನಿತ್ಯಮಾತೃರೂಪಶಕ್ತಿಭಾವಭಾವುಕಮ್ ।**
**ಜ್ಞಾನಭಕ್ತಿಭುಕ್ತಿಮುಕ್ತಿಶುದ್ಧಬುದ್ಧಿದಾಯಕಂ**
**ತಂ ನಮಾಮಿ ದೇವದೇವರಾಮಕೃಷ್ಣಮೀಶ್ವರಮ್ ॥**

ಮಣ್ಣುಚಿನ್ನಗಳನ್ನು ಸಮವಾಗೆಣಿಸಿದವನೂ, ರಾಗದ್ವೇಷಗಳನ್ನು ನೀಗಿಕೊಂಡವನೂ, ಸ್ತ್ರೀಯರಲ್ಲಿ ಸದಾ ಜಗನ್ಮಾತೃಶಕ್ತಿಯ ಭಾವವನ್ನು ಹೊಂದಿರುವವನೂ, ಜ್ಞಾನ ಭಕ್ತಿ ಭೋಗ ಮೋಕ್ಷ ಶುದ್ಧಬುದ್ಧಿಗಳನ್ನು ಕೊಡುವವನೂ, ದೇವದೇವನೂ ಈಶ್ವರನೂ ಆದ ರಾಮಕೃಷ್ಣನಿಗೆ ನಮಿಸುತ್ತೇನೆ.



**ಸರ್ವಧರ್ಮಗಮ್ಯಮೂಲಸತ್ಯತತ್ತ್ವದೇಶಕಂ**
**ಸಿದ್ಧಸರ್ವಸಂಪ್ರದಾಯಸಾಂಪ್ರದಾಯವರ್ಜಿತಮ್**
**ಸರ್ವಶಾಸ್ತ್ರಮರ್ಮದರ್ಶಿಸರ್ವವಿನ್ನಿರಕ್ಷರಂ**
**ತಂ ನಮಾಮಿ ದೇವದೇವರಾಮಕೃಷ್ಣಮೀಶ್ವರಮ್ ॥**

ಎಲ್ಲ ಧರ್ಮಗಳಿಂದಲೂ ಪಡೆಯಬಹುದಾದ ಮೂಲಸತ್ಯದ ಸ್ವರೂಪವನ್ನು ಒಂದೇ ಎಂದು ತೋರಿಸಿಕೊಟ್ಟವನೂ, ಎಲ್ಲ ಸಂಪ್ರದಾಯಗಳಲ್ಲಿ ಸಿದ್ಧಿಯನ್ನು ಹೊಂದಿದ್ದರೂ ತನ್ನದೇ ಆದ ವಿಶೇಷ ಸಂಪ್ರದಾಯವೊಂದನ್ನು ನಿರ್ಮಿಸದವನೂ, ಎಲ್ಲ ಶಾಸ್ತ್ರಗಳ ಸಾರವನ್ನು ಅರಿತಿದ್ದರೂ ನಿರಕ್ಷರನೂ, ದೇವದೇವನೂ ಈಶ್ವರನೂ ಆದ ರಾಮಕೃಷ್ಣನಿಗೆ ನಮಸ್ಕರಿಸುತ್ತೇನೆ.

**ಪಂಚವರ್ಷಬಾಲಭಾವಯುಕ್ತಹಂಸರೂಪಿಣಂ**
**ಸರ್ವಲೋಕರಂಜನಂ ಭವಾಬ್ಧಿಸಂಗಭಂಜನಮ್ ।**
**ಶಾಂತಿಸೌಖ್ಯಸದ್ಮಜೀವಜನ್ಮಭೀತಿನಾಶನಂ**
**ತಂ ನಮಾಮಿ ದೇವದೇವರಾಮಕೃಷ್ಣಮೀಶ್ವರಮ್ ॥**

ಐದು ವರ್ಷದ ಬಾಲಕನಂತಿರುವವನೂ, ಪರಮಹಂಸರೂಪಿಯೂ, ಎಲ್ಲ ಜನರನ್ನೂ ಸಂತೋಷಪಡಿಸುವವನೂ, ಸಂಸಾರ ಸಾಗರದಲ್ಲಿನ ಆಸಕ್ತಿಯನ್ನು ನಾಶಪಡಿಸುವವನೂ, ಶಾಂತಿಸೌಖ್ಯಗಳ ನೆಲೆವೀಡಾಗಿರುವವನೂ, ಜೀವರುಗಳ ಜನನಮರಣಗಳ ಭಯವನ್ನು ಹೋಗಲಾಡಿಸುವವನೂ, ದೇವದೇವನೂ ಈಶ್ವರನೂ ಆದ ರಾಮಕೃಷ್ಣನನ್ನು ವಂದಿಸುತ್ತೇನೆ.

– ಸ್ವಾಮಿ ವಿರಜಾನಂದರ *'ಶ್ರೀರಾಮಕೃಷ್ಣ ಸ್ತೋತ್ರದಶಕ'* ದಿಂದ

# ಸಾಧನೆ

ಆಳವಿಲ್ಲದ ಕೊಳದಲ್ಲಿ ಶುದ್ಧವಾದ ನೀರನ್ನು ಕುಡಿಯಬೇಕಾದರೆ ಮೇಲಿರುವ ನೀರನ್ನು ಸ್ವಲ್ಪವೂ ಕದಡದೆ ಕುಡಿಯಬೇಕು. ಅದನ್ನು ಕಲಕಿದರೆ ಬಗ್ಗಡ ಮೇಲೆದ್ದು ನೀರನ್ನೆಲ್ಲಾ ಕದಡುವುದು. ನೀನು ಪರಿಶುದ್ಧವಾಗಿರಬೇಕೆಂದು ಆಶಿಸಿದರೆ ಅಚಲವಾದ ಶ್ರದ್ಧೆಯಿರಲಿ. ಕೆಲಸಕ್ಕೆ ಬಾರದ ವಾದವಿವಾದಗಳಲ್ಲಿ ಕಾಲಹರಣ ಮಾಡದೆ, ಕ್ರಮೇಣ ಸಾಧನೆ ಮಾಡುತ್ತಾ ಹೋಗು. ಇಲ್ಲದೆ ಇದ್ದರೆ ನಿನ್ನ ಬುದ್ಧಿ ಕೆಡುವುದು.

ನೀನು ಸೇರಬೇಕೆಂದಿರುವ ಗುರಿಗೆ ಸರಿಯಾಗಿ ಸನ್ನಾಹ ಮಾಡಿಕೊ. ಹಾಲಿನಲ್ಲಿ ಬೆಣ್ಣೆ ಇದೆ ಎಂದು ಸುಮ್ಮನೆ ಕಿರುಚಿದರೆ ಬೆಣ್ಣೆ ಬರುವುದಿಲ್ಲ. ನಿನಗೆ ಬೆಣ್ಣೆ ಬೇಕಾದರೆ ಹಾಲನ್ನು ಮೊಸರು ಮಾಡಿ ಅದನ್ನು ಕಡೆಯಬೇಕು. ನೀನು ದೇವರನ್ನು ನೋಡ ಬೇಕಾದರೆ ಸಾಧನೆಗೆ ಕೈಹಾಕು. "ಹೇ ಭಗವಂತ, ಹೇ, ಭಗವಂತ!" ಎಂದು ಸುಮ್ಮನೆ ಕೂಗುವುದರಿಂದೇನು ಪ್ರಯೋಜನ?

ಅರಮನೆಯಲ್ಲಿ ರಾಜನನ್ನು ನೋಡಬೇಕಾದರೆ ಅವನು ಅರಮನೆಯ ಹತ್ತಿರ ಹೋಗಿ ಎಲ್ಲ ಬಾಗಿಲುಗಳನ್ನೂ ದಾಟಿ ಹೋಗಬೇಕು. ಆದರೆ ಮೊದಲನೆಯ ಬಾಗಿಲನ್ನು ದಾಟಿ ದೊಡನೆಯೆ "ದೊರೆ ಎಲ್ಲಿ?" ಎಂದು ಕೇಳಿದರೆ ಅವನು ಕಾಣು ವುದಿಲ್ಲ. ಏಳು ಬಾಗಿಲುಗಳನ್ನು ದಾಟಿ ಹೋದರೆ ಆಗ ಮಾತ್ರ ಅವನನ್ನು ಕಾಣಬಹುದು.

ಸಾಕ್ಷಾತ್ಕಾರಕ್ಕೆ ನಿರಂತರ ಪ್ರಯತ್ನ ಅವಶ್ಯಕ. ನಾನು ಒಂದು ದಿನ ಭಾವಸಮಾಧಿಯಲ್ಲಿ ಹಲದಾರಪುಕುರವನ್ನು ನೋಡಿದೆನು. ಅಲ್ಲಿ ಒಬ್ಬ ಹಳ್ಳಿಯವನು ನೀರನ್ನು ತೆಗೆದುಕೊಳ್ಳುತ್ತಿದ್ದನು. ನೀರಿನ ಮೇಲೆದ್ದ ಪಾಚಿಯನ್ನು ತೆಗೆದುಕೊಂಡು ಪರೀಕ್ಷಿಸುತ್ತಿದ್ದನು. ಪಾಚಿಯನ್ನು ತೆಗೆಯದೆ ನೀರು ಹೇಗೆ ಸಿಕ್ಕುವುದಿಲ್ಲವೋ ಹಾಗೆಯೆ ಪರಮಾತ್ಮನ ಮೇಲೆ ಭಕ್ತಿ ಮತ್ತು ಆತನ ಸಾಕ್ಷಾತ್ಕಾರ – ಇವಕ್ಕೆ ಪ್ರಯತ್ನಪಟ್ಟಲ್ಲದೆ ಸಿಕ್ಕುವುದಿಲ್ಲ. ಧ್ಯಾನ, ಜಪ, ಕೀರ್ತನೆ, ಧರ್ಮ, ಪೂಜೆ ಮುಂತಾದ ಪುಣ್ಯ ಕೆಲಸಗಳೇ ಅವನನ್ನು ಸೇರುವುದಕ್ಕೆ ಮಾರ್ಗ.

ಭಗವಂತನ ನಾಮದ ಶಕ್ತಿಯಲ್ಲಿ ಯಾರು ಒಮ್ಮೆ ನಂಬಿ ಅನವರತವೂ ಅದನ್ನು ಉಚ್ಚರಿಸುವುದಕ್ಕೆ ಬಯಸುವನೋ ಆಗ ವಿವೇಕ ಮತ್ತು ಇತರ ಯಾವ ಭಕ್ತಿಸಾಧನೆಯೂ ಅವನಿಗೆ ಅವಶ್ಯಕವಿಲ್ಲ. ಅವನ ಸಂಶಯಗಳೆಲ್ಲ ನಿವಾರಣೆಯಾಗುವುವು; ಮನಸ್ಸು ಶುದ್ಧವಾಗುವುದು. ಹೀಗೆ ನಾಮದ ಬಲದಿಂದಲೇ ಭಗವಂತನನ್ನು ಪಡೆಯಬಹುದು.

ವೇದ ಮತ್ತು ಪುರಾಣಗಳನ್ನು ಓದಬೇಕು. ಆದರೆ ತಂತ್ರದ ಬೋಧನೆಯಂತೆ ಆಚರಿಸಬೇಕು. ಹರಿನಾಮವನ್ನು ನೀವು ಬಾಯಿಯಲ್ಲಿ ಉಚ್ಚಾರ ಮಾಡಬೇಕು, ಕಿವಿಯಿಂದಲೂ ಕೇಳಬೇಕು. ಕೆಲವು ರೋಗಗಳಿಗೆ ಔಷಧಿಯನ್ನು ಹೊರಗೆ ಲೇಪಿಸುವುದು ಮಾತ್ರವಲ್ಲ, ಒಳಗೂ ಸೇವಿಸಬೇಕು.

–ಶ್ರೀರಾಮಕೃಷ್ಣ